

# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಹೆಚ್.ಪಿ. ಸುಧಾಮ್ ದಾಸ್ ಇವರು ನಿಯಮ–72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ವಿಷಯ: ಬಿಡದಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಜಿ ಕೆ. ಶಂಕರ್‌ನಾಯಕ್ ಹಲವು ವರ್ಷಗಳಿಂದ ಅನೇಕ ಸಾರ್ವಜನಿಕ ದೂರುದಾರರಿಂದ ಲಕ್ಷಾಂತರ ರೂಪಾಯಿ ದೋಚಿ ಅನೇಕ ಅಕ್ರಮ ಕಾರ್ಯಗಳನ್ನು ನಡೆಸಿರುವುದರ ಕುರಿತಂತೆ ದಿನಾಂಕ: 13.12.2023ರ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಹಾಗೂ ಇನ್ನಿತರ ಪತ್ರಿಕೆಗಳಲ್ಲಿ ವರದಿಯಾಗಿದ್ದು ಇವರ ವಿರುದ್ಧ ವಿಚಾರಣೆ ನಡೆಸಿದ್ದ ಅಂದಿನ ಕೆಂಗೇರಿ ಗೇಟ್ ಎಸಿಪಿ ಯವರು ಇವರ ಮೇಲಿನ ಆರೋಪಗಳು ಸಾಭಿತಾಗಿದ್ದು, ಶಿಸ್ತು ಕ್ರಮಕೈಗೊಳ್ಳಬೇಕು ಎಂದು ಡಿಸಿಪಿ ಯವರಿಗೆ ವರದಿ ಸಲ್ಲಿಸಿದ್ದರೂ ಅವರ ವಿರುದ್ಧ ಎಫ್.ಐ.ಆರ್. ದಾಖಲಿಸುವ ಬದಲು ಸದರಿ ವರದಿ ಮುಚ್ಚಿಟ್ಟು ಬ್ಯಾಟರಾಯನಪುರದಿಂದ ಬಿಡದಿ ಪೊಲೀಸ್ ಠಾಣೆಗೆ ವರ್ಗಾಯಿಸಲು ಅನುವು ಮಾಡಿಕೊಟ್ಟ ಹಿರಿಯ ಅಧಿಕಾರಿಗಳ ಅಕ್ರಮ ನಡವಳಿಗೆ ಕರಿತಂತೆ ಗೃಹ ಸಚಿವರ ಗಮನ ಸೆಳೆಯುವ ಕುರಿತು.

ಉತ್ತರ: ಶ್ರೀ ಜಿ ಕೆ ಶಂಕರ್ ನಾಯಕ್, ಪಿ.ಐ. ರವರು 2007 ರಲ್ಲಿ ಪಿ.ಎಸ್.ಐ. ಹುದ್ದೆಗೆ ನೇಮಕಾತಿ ಹೊಂದಿದ್ದು, 2019 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗೆ ಮುಂಬಡ್ತಿ ಹೊಂದಿದ ನಂತರ ಕಾರ್ಯಕಾರ್ಯೇತರ ಹುದ್ದೆಯಲ್ಲಿ 02 ವರ್ಷಗಳ ಅವಧಿಗೆ ಸೇವೆ ಸಲ್ಲಿಸಿ ನಂತರ ದಿನಾಂಕ: 11.10.2021 ರಿಂದ 28.01.2023ರ ವರೆಗೆ ಬೆಂಗಳೂರು ನಗರದ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ನಂತರ ಸ್ಥಳ ನೇಮಕಾತಿ ನಿರೀಕ್ಷಣೆಯಲ್ಲಿದ್ದು, ವಿಧಾನ ಸಭೆ ಚುನಾವಣಾ ಕರ್ತವ್ಯ ನಿಮಿತ್ತ ದಿನಾಂಕ: 01.02.2023 ರಿಂದ 02.6.2023ರ ವರೆಗೆ ಬೆಂಗಳೂರು ಜಿಲ್ಲೆಯ ಆನೇಕಲ್ ಪೊಲೀಸ್ ಠಾಣೆಗೆ ನಿಯುಕ್ತಿಗೊಳಿಸಲಾಗಿರುತ್ತದೆ.

ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: 1146/ಡಿಇ–1/ಸಿಓಪಿ/2023, ದಿನಾಂಕ: 28.11.2023ರಲ್ಲಿ ಸಲ್ಲಿಸಿರುವ ವರದಿಯಲ್ಲಿ, ಶ್ರೀ ಶಂಕರ್ ನಾಯಕ್ ಪಿ.ಐ. ಬಿಡದಿ ಪೊಲೀಸ್ ಠಾಣೆ ರವರು ಈ ಹಿಂದೆ ಬೆಂಗಳೂರು ನಗರದ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮೊ.ಸಂ: 247/2022 ಕಲಂ: 381, 420 ಪ್ರಕರಣವನ್ನು ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಗೆ ಬರದೇ ಇದ್ದರೂ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದೂರುದಾರರಾದ ಶ್ರೀ ಹರೀಶ್ ಬಿನ್ ಪ್ರಸಾದ್ ರಾವ್ ರವರ ನಕಲಿ ಸಹಿ ಇರುವ ದೂರನ್ನು ಪಡೆದುಕೊಂಡು ಅಧಿಕಾರ ದುರುಪಯೋಗಪಡಿಸಿಕೊಂಡು ಮೊಕದ್ದಮೆ ದಾಖಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಮೇಲಾಧಿಕಾರಿಗಳ ನಿರ್ದೇಶನವನ್ನು ಪಾಲಿಸದೇ ಜಪ್ತು ಮಾಡಲಾದ ಮೊತ್ತ ರೂ.72.00 ಲಕ್ಷಗಳನ್ನು ಖಜಾನೆಗೆ ಜಮಾ ಮಾಡದೇ ಅಧಿಕಾರ ದುರುಪಯೋಗಪಡಿಸಿಕೊಂಡು ತಮ್ಮ ಬಳಿಯೇ ಇಟ್ಟುಕೊಂಡು ಠಾಣೆಯಿಂದ ವರ್ಗಾವಣೆಗೊಂಡರೂ ಪೂರ್ಣ ಪ್ರಮಾಣದ ಅಧಿಕಾರವನ್ನು ಶ್ರೀ ನಿಂಗೇಗೌಡ, ಪಿ.ಐ. ರವರಿಗೆ ವಹಿಸದೇ ಕರ್ತವ್ಯ ಲೋಪವೆಸಗಿರುತ್ತಾರೆ. ಈ ಪ್ರಕರಣದ ಹಿನ್ನಲೆಯಲ್ಲಿ ಶ್ರೀ ಭರತ್ ರೆಡ್ಡಿ, ಎಸಿಪಿ ಬ್ಯಾಟರಾಯನಪುರ ಉಪ–ವಿಭಾಗ (ಈ ಹಿಂದೆ ಕೆಂಗೇರಿ ಗೇಟ್ ಉಪ–ವಿಭಾಗ) ರವರು ಸದರಿ ಶ್ರೀ ಶಂಕರ ನಾಯಕ್, ಪಿ.ಐ. ಬಿಡದಿ ಪೊಲೀಸ್ ಠಾಣೆ ರವರ ವಿರುದ್ಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದಿನಾಂಕ: 22.11.2023 ರಂದು ಮೊ.ಸಂ: 454/2023 ಕಲಂ: 201, 409, 110, 465 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಹಾಗೂ ಸದರಿ ಪಿ.ಐ. ರವರು ಈ ಹಿಂದೆ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮೊ.ಸಂ: 204/2022 ಕಲಂ 384, 506 ಐಪಿಸಿ ಕಲಂ 66(ಇ), 67(ಎ) ಐ.ಟಿ ಆಕ್ಟ್, ಮತ್ತು ಕಲಂ 15 ಪೋಕ್ಸೋ ಆಕ್ಟ್ ರಲ್ಲಿ ಸುಮಿತ್ ಎಂಬುವವರನ್ನು ಅಕ್ರಮ ಬಂಧನದಲ್ಲಿಟ್ಟಿರುವ ಬಗ್ಗೆ ಮತ್ತು ಮೊ.ಸಂ: ಮೊ.ಸಂ 222/2022

ಕಲಂ 364ಎ, 384, 419, 506 ಜೊತೆಗೆ 149 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿ.ಎಫ್ ಮೊತ್ತವನ್ನು ಫಿರ್ಯಾಧಿಗೆ ವಿಳಂಬವಾಗಿ ಬಿಡುಗಡೆ ಮಾಡಿರುವ ಪ್ರಕರಣಗಳಿಗೆ ದಾಖಲೆಗಳನ್ನು ಪರಿಶೀಲಿಸಿ, ಕೆ.ಎಸ್.ಪಿ. ಡಿ.ಪಿ. ನಿಯಮಗಳನ್ವಯ ಶಿಸ್ತು ಕ್ರಮ ಜರುಗಿಸುವ ಹಂತದಲ್ಲಿರುತ್ತದೆ.

ಸ್ಥಳ ನಿರೀಕ್ಷಣೆಯಲ್ಲಿದ್ದ ಶ್ರೀ ಶಂಕರ ನಾಯಕ್, ಜಿ.ಕೆ. ಪಿ.ಐ. ರವರ ವಿರುದ್ಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗುವ ಪೂರ್ವದಲ್ಲಿಯೇ ಇವರನ್ನು ಬಿಡದಿ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.

ಮೇಲೆ ವಿವರಿಸಿದಂತೆ, ಶ್ರೀ ಶಂಕರ್ ನಾಯಕ್, ಜಿ.ಕೆ. ಪಿ.ಐ. ರವರ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣದ ಹಿನ್ನಲೆಯಲ್ಲಿ ಹಾಗೂ ಕರ್ತವ್ಯ ಲೋಪ ಮತ್ತು ದುರ್ನಡತೆಯ ಸಂಬಂಧ ಸದರಿ ಪಿ.ಐ. ರವರನ್ನು ಸರ್ಕಾರಿ ಸೇವೆಯಲ್ಲಿ ಮುಂದುವರೆಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪೊಲೀಸ್ ಮಹಾನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ರವರು ಆದೇಶ ಸಂ: ಡಿಇ/31/ಶಿಕ್ಷೆ/ಕೇಂ.ವ/2023 ದಿನಾಂಕ: 13.12.2023 ರಂದು ಅವರ ವಿರುದ್ಧ ಕೆ.ಎಸ್.ಪಿ. (ಡಿಪಿ) ನಿಯಮ 1965/89 ತಿದ್ದುಪಡಿ ನಿಯಮ 2022ರ ನಿಯಮ 6ರಡಿ ಇಲಾಖಾ ಶಿಸ್ತು ಕ್ರಮ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ. ಮುಂದುವರೆದು ಸದರಿ ಪಿ.ಐ. ರವರ ಅಮಾನತ್ತಿನ ಲೀನ್ ಅನ್ನು ಕಾರ್ಯನಿರ್ವಹಕವಲ್ಲದ ಹುದ್ದೆಯಾದ ಪಿ.ಟಿ.ಎಸ್. ಖಾನಪುರ ಘಟಕಕ್ಕೆ ಸ್ಥಳಾಂತರಿಸಿ ಆದೇಶಿಸಲಾಗಿರುತ್ತದೆ.

**ಸಂಖ್ಯೆ: ಹೆಚ್‌ಡಿ 330 ಪಿಇಎಮ್ 2023**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು.